ಅ) ಸರ್ಕಾರಿ ಆದೇಶ ಸಂ.ಆರ್‌ಎಸ್‌ಆರ್: 10: ಎಕ್ಸ್‌ಎಂಸಿ: 97-98, ದಿನಾಂಕ: 20-1-1998 ರನ್ವಯ ಸಹಕಾರ ಇಲಾಖೆಯ ಸಭೆ ಸಹಕಾರ ಸಚಿವರ ನಿವಾಸದಲ್ಲಿ ಸಭೆ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಸಹಕಾರ ಸಂಘಗಳ ಕಾರ್ಯಕಾರಿ ಸಮಿತಿ ಸದಸ್ಯರ ಸಂಖ್ಯೆ ಕಡಿತಗೊಳಿಸಲು ಕಾರಣವೇನು?

ಇ) ಈ ಆದೇಶವನ್ನು ಸರ್ಕಾರ ತಿದ್ದುಡಿ ಮಾಡಬಹುದೇ?

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರಿ ಸಚಿವರು):

ಅ) ಹೌದು.

ಆ) ರಾಜ್ಯದ ವಿವಿಧ ಕಾರ್ಯವ್ಯಾಪ್ತಿಯುಳ್ಳ ಸಹಕಾರ ಸಂಘಗಳ ಆಡಳಿತ ಮಂಡಳಿಯ ಗರಿಷ್ಠ ಸದಸ್ಯರ ಸಂಖ್ಯೆಯ ಮಿತಿಯನ್ನು ಸರಿಸಮಾನವಾಗಿರಬೇಕೆಂಬ ದೃಷ್ಟಿಯಿಂದ ಹಾಗೂ ಸಹಕಾರ ಸಂಘಗಳ ಆಡಳಿತಾತ್ಮಕವಾದ ವೆಚ್ಚಗಳನ್ನು ನಿಯಂತ್ರಿಸುವ ದೃಷ್ಟಿಯಿಂದ ಸದರಿ ಆದೇಶವನ್ನು ಹೊರಡಿಸಲಾಗಿದೆ.

ಇ) ಅವಶ್ಯಕತೆ ಕಂಡು ಬಂದಲ್ಲಿ ಮಾಡಬಹುದು.

ವಿಷಯ: ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ.

1113 (1567)

ಶ್ರೀ ಕುಂಬೈ ಸುಂದರ್‌ರಾವ್ (ಸುರತ್ಕಲ್): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ತೋಟಗಾರಿಕೆ ಹಾಗೂ ಹಣ್ಣುಗಳ ಬೆಳೆ ಅಭಿವೃದ್ಧಿಗಾಗಿ ಕಾರ್ಯಗತಗೊಳಿಸುತ್ತಿರುವ ಯೋಜನೆಗಳಾವುವು?

ಆ) ತೋಟದ ಬೆಳೆಗಳಾದ ಕೊಕೋ, ಅಡಿಕೆ ಇತ್ಯಾದಿ ಬೆಳೆಗಳನ್ನು ಬೆಳೆಯುವ ರೈತರಿಗೆ ನೀಡುತ್ತಿರುವ ಸೌಲಭ್ಯಗಳೇನು?

ಇ) ಗೇರು ಮತ್ತು ಅಡಿಕೆ ಅಭಿವೃದ್ಧಿ ಯೋಜನೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಲಾದ ಮೊತ್ತ ಎಷ್ಟು ಮತ್ತು ಅಲ್ಲಿ ಈ ಬೆಳೆಗಳ ಅಭಿವೃದ್ಧಿ ಆಗಿದೆಯೇ.

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯ ಸಚಿವರು):

ಅ) ವಿವರಗಳನ್ನು ಅನುಬಂದ- 1ರಲ್ಲಿ ಒದಗಿಸಿದೆ.

ಆ) ವಿವರಗಳನ್ನು ಅನುಬಂದ -2ರಲ್ಲಿ ಒದಗಿಸಿದೆ.

ಇ) ವಿವರಗಳನ್ನು ಅನುಬಂಧ- 3ರಲ್ಲಿ ಒದಗಿಸಿದೆ. ಹೌದು.

ಅನುಬಂಧ- I

1998-99ನೇ ಸಾಲಿನಲ್ಲಿ ರಾಜ್ಯದಲ್ಲಿ ತೋಟಗಾರಿಕೆ ಹಾಗೂ ಹಣ್ಣುಗಳ ಬೆಳೆ ಅಭಿವೃದ್ಧಿಗಾಗಿ ಕಾರ್ಯಗತಗೊಳಿಸುವ ಯೋಜನೆಗಳ ಪಟ್ಟಿ

ಕ್ರ. ಸಂ.	ಯೋಜನೆಯ ಹೆಸರು
1.	ತೆಂಗು ಅಭಿವೃದ್ಧಿ ಮಂಡಳಿ ನೆರವಿನೊಂದಿಗೆ ತೆಂಗು ಅಭಿವೃದ್ಧಿ (50:50)
2.	ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ
3.	ಸಾಂಬಾರು ಬೆಳೆಯ ಸಮಗ್ರ ಅಭಿವೃದ್ಧಿ ಕೇಂದ್ರ ಪುರಸ್ಕೃತ ಕಾರ್ಯಯೋಜನೆ
4.	ಕೋಕೋ ಅಭಿವೃದ್ಧಿ ಕೇಂದ್ರ ವಲಯ ಯೋಜನೆ.
5.	ಟ್ರಾಪಿಕಲ್ ಮತ್ತು ಶುಷ್ಕವಲಯದ ಹಣ್ಣುಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರವಲಯ ಯೋಜನೆ
6.	ಗ್ರಾಮೀಣ ಪ್ರದೇಶಗಳಲ್ಲಿ ಪೌಷ್ಟಿಕಾಂಶ ತೋಟಗಳನ್ನು ಸ್ಥಾಪಿಸಲು ಕೇಂದ್ರ ಪುರಸ್ಕೃತ ಯೋಜನೆ
7.	ಹನಿ ನೀರಾವರಿಗಾಗಿ ಕೇಂದ್ರವಲಯ ಯೋಜನೆ (ಕೃಷಿಯಲ್ಲಿ ಪ್ಲಾಸ್ಟಿಕ್ ಬಳಕೆ)
8.	ತೆಂಗು ಅಭಿವೃದ್ಧಿ ಮಂಡಳಿಯ ಸಹಾಯದಲ್ಲಿ ತೆಂಗು ಉತ್ಪಾದಕತೆ ಯೋಜನೆ: ಅಭಿವೃದ್ಧಿಯ ಸಮಗ್ರ ಬೇಸಾಯದ ಯೋಜನೆ.
9.	ವೆನಿಲ್ಲಾ ಅಭಿವೃದ್ಧಿ ಯೋಜನೆ.
10.	ಸುಗಂಧಿತ ಮತ್ತು ಔಷಧೀಯ ಸಸ್ಯಗಳ ಅಭಿವೃದ್ಧಿ
11.	ಅಣಬೆ ಅಭಿವೃದ್ಧಿ
12.	ಮಿನಿಕಿಟ್ ಹಂಚಿಕೆಯ ಮೂಲಕ ಹಣ್ಣು ಮತ್ತು ತರಕಾರಿಗಳ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸಲು ಕೇಂದ್ರ ಪುರಸ್ಕೃತ ಯೋಜನೆ.
13.	ನೈಜ ಆಲೂಗೆಡ್ಡೆ ಬಿತ್ತನೆ ಬೀಜಗಳ ಉತ್ಪಾದನೆಗಾಗಿ ಯೋಜನೆ.
14.	ಬೆಳಗಾಂ ಮತ್ತು ಬಿಜಾಪುರ ಪ್ರದೇಶಗಳಲ್ಲಿ ರಫ್ತು ಮಾರುಕಟ್ಟೆಗಾಗಿ ದ್ರಾಕ್ಷಿ

15. ವಾಣಿಜ್ಯ ಪುಷ್ಪ ಅಭಿವೃದ್ಧಿ

16. ಗೇರು ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಪುರಸ್ಕೃತ ಯೋಜನೆ.

17. ತೋಟಗಾರಿಕೆ ಬೆಳೆಗಳಿಗಾಗಿ ಉತ್ಕೃಷ್ಟ ನಾಟಿ ಮಾಡುವ ವಸ್ತುಗಳ ಉತ್ಪಾದನೆ ಮತ್ತು ವಿತರಣೆ.

18. ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣಕ್ಕಾಗಿ ಯೋಜನೆ.

19. ಗಿರಿಜನ ಉಪಯೋಜನೆ.

20. ವಿಶೇಷ ಘಟಕ ಯೋಜನೆ.

21. 8ನೇ ಪಂಚವಾರ್ಷಿಕ ಯೋಜನೆ - ಕಂದಮೂಲಗಳ ಬೆಳೆಗಾಗಿ ಯೋಜನೆ.

22. ನಮ್ಮ ಮನೆ ನಮ್ಮ ತೋಟ.

ಅನುಬಂದ - 2

ಪ್ರಶ್ನೆ : (ಅ) ತೋಟದ ಬೆಳೆಗಳಾದ ಕೊಕೋ ಅಡಿಕೆ, ಮೆಣಸು ಇತ್ಯಾದಿ ಬೆಳೆಗಳನ್ನ ಬೆಳೆಯುವ ರೈತರಿಗೆ ನೀಡುತ್ತಿರುವ ಸೌಲಭ್ಯಗಳೇನು?

ಕ್ರಮ	ಕೇಂದ್ರವಲಯ ಕೊಕೋ ಅಭಿವೃದ್ಧಿ ಯೋಜನೆ	ಅಡಿಕೆ ಅಭಿವೃದ್ಧಿ ಯೋಜನೆ	ಕರಿಮೆಣಸು ಅಭಿವೃದ್ಧಿ ಕಾರ್ಯಕ್ರಮ
1	2	3	4
1.	ಕೊಕೋ ಬೆಳೆಗಾರರಿಗೆ ನೀರಾವರಿ ಸೌಲತ್ತು ಕಲ್ಪಿಸಲು ಶೇ.25ರಷ್ಟು ಪ್ರತಿ ಘಟಕಕ್ಕೆ ರೂ. 4000-00ರಂತೆ ಸಹಾಯಧನ ಒದಗಿಸುವ ಕಾರ್ಯಕ್ರಮ.	ಅಡಿಕೆ ಬೆಳೆಯುವ ರೈತರಿಗೆ (ಸಣ್ಣ, ಅತಿ ಸಣ್ಣ ರೈತರಿಗೆ) ಶೇ.50 ರಿಯಾಯಿತಿ ದರದಲ್ಲಿ ಕೊಳೆ ರೋಗ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣೆ ಔಷಧಿ ಸರಬರಾಜು ಮಾಡಲು ಕಾರ್ಯಕ್ರಮ (ಪ್ರತಿ ಫಲಾನುಭವಿ - ಪ್ರತಿ ಹೆಕ್ಟರ್‌ಗೆ ರೂ. 400-00ರಂತೆ ಸಹಾಯಧನ ಒದಗಿಸುವುದು	ಬೇರು ಭರಿಸಿದ ಕರಿಮೆಣಸು ಸಸಿಗಳ ಉತ್ಪಾದನೆಗಾಗಿ ಕಾರ್ಯಕ್ರಮ-ಪ್ರತಿ ಸಸಿ ಉತ್ಪಾದನಾ ವೆಚ್ಚ ರೂ. 1.50 ಪೈಸೆ - ಹಾಗೂ ಈ ಸಸಿಗಳನ್ನು ಪ್ರಾತ್ಯಕ್ಷತೆ - ಪ್ರದೇಶ ವಿಸ್ತರಣೆ ಕಾರ್ಯಕ್ರಮಗಳ ರೈತರಿಗೆ ರಿಯಾಯಿತಿ ದರದಲ್ಲಿ (ಶೇ. 50) 75: ಪೈಸೆಯಂತೆ ವಿತರಿಸಲು ಕಾರ್ಯಕ್ರಮ.
2.	ಕೊಕೋ ಪ್ರಾತ್ಯಕ್ಷತೆಗಳ ಸ್ಥಾಪನೆಗಾಗಿ ಕಾರ್ಯಕ್ರಮ ಪ್ರತಿ ಘಟಕ ಸ್ಥಾಪನೆಗಾಗಿ ರೂ. 700-00ರಂತೆ ಗಿಡ ಸಾಮಗ್ರಿ ಇತ್ಯಾದಿ ಪೂರೈಸಲು ಸೌಲಭ್ಯ ಒದಗಿಸುವುದು.	ಪ್ರತಿ ಫಲಾನುಭವಿಗೆ ಶೇ.50 ರಿಯಾಯಿತಿ ದರದಲ್ಲಿ ರೂ. 900-00 ಪ್ರತಿ ಘಟಕಕ್ಕೆ ಸಸ್ಯ ಸಂರಕ್ಷಣೆ ಉಪಕರಣ ಸರಬರಾಜು ಮಾಡಲು ಕಾರ್ಯಕ್ರಮ.	ಕರಿಮೆಣಸು - ಹಳೆ ತೋಟಗಳನ್ನು ಪುನಶ್ಚೇತನಗೊಳಿಸಲು ಪ್ರತಿ ಘಟಕಕ್ಕೆ ಹೆಕ್ಟರ್ ರೂ. 3500-00ರಂತೆ ಸಾಮಗ್ರಿ ಇತ್ಯಾದಿ ಒದಗಿಸಲು ಕಾರ್ಯಕ್ರಮ - ಇದೇ ತೋಟಗಳನ್ನು ಎರಡನೇ ವರ್ಷ

1	2	3	4
			ನಿರ್ವಹಿಸಲು ರೂ. 1300-00 3ನೇ ವರ್ಷ ರೂ. 1600-00ರಂತೆ ಸಾಮಗ್ರಿ ವೆಚ್ಚ - ನಿರ್ವಹಣಾ ವೆಚ್ಚ ಭರಿಸುವ ಸೌಲಭ್ಯ ಒದಗಿಸಲು ಕಾರ್ಯಕ್ರಮ.
3.	ಕೊಕೋ ಪ್ರಾತ್ಯಕ್ಷತೆಗಳ ನಿರ್ವಹಣೆಗಾಗಿ 1ನೇ ವರ್ಷ ರೂ. 300-00 ರಂತೆ ಸಾಮಗ್ರಿ ಪೂರೈಕೆಗಾಗಿ ಕಾರ್ಯಕ್ರಮ.	ಅಡಿಕೆ-ಹಳದಿರೋಗ ನಿಯಂತ್ರಣಕ್ಕಾಗಿ ಪ್ರತಿ ರೋಗ ಪೀಡಿತ ಗಿಡ ತೆಗೆಯಿಸಲು ರೂ. 100 ರಂತೆ ಪರಿಹಾರ ಧನ ಒದಗಿಸಲು ಹಾಗೂ ಹೊಸ ಸಸಿ ನೆಡಲು ಸಹಾಯಧನ ಒದಗಿಸುವ ಕಾರ್ಯಕ್ರಮ.	ಕರಿಮೆಣಸು ಶೀಘ್ರ ಸೊರಗು ರೋಗ ನಿಯಂತ್ರಣಕ್ಕಾಗಿ ಶೇ. 50 ರಿಯಾಯಿತಿ ಸೌಲಭ್ಯದಡಿ ಪ್ರತಿ ಹೆಕ್ಟೆರ್ - ಪ್ರತಿ ಫಲಾನುಭವಿಗೆ ರೂ. 1860-00 ಮೌಲ್ಯದ ಸಸ್ಯ ಸಂರಕ್ಷಣಾ ಔಷಧಿ ಒದಗಿಸಲು ಕಾರ್ಯಕ್ರಮ.
4.	ಕೊಕೋ ಬೆಳೆ ತೋಟಗಳ ಪುನಶ್ಚೇತನ ಕಾರ್ಯ ಕ್ರಮದಡಿ ಮೊದಲನೆ ವರ್ಷ ರೂ. 2000-00 (ಪ್ರತಿ ಘಟಕ - 1 ಹೇ) ಹಾಗೂ ಎರಡನೇ ವರ್ಷ ನಿರ್ವಹಣೆಗಾಗಿ ರೂ. 1000-00ರಂತೆ ಸಾಮಾಗ್ರಿ ಖರೀದಿ ನಿರ್ವಹಣೆಗಾಗಿ ಕಾರ್ಯಕ್ರಮವಿರುತ್ತದೆ.	ಅಡಿಕೆ ಬೆಳೆಗಾರರಿಗೆ (ಸಣ್ಣ, ಅತಿ ಸಣ್ಣ ರೈತರಿಗೆ) ನೀರಾವರಿ ಸೌಲತ್ತು ಕಲ್ಪಿಸಿ - ಸೌಲಭ್ಯ ಬಲಪಡಿಸಲು ಪ್ರತಿ ಘಟಕಕ್ಕೆ ರೂ. 4000-00ರಂತೆ ಶೇ. 25ರಷ್ಟು ಸಹಾಯಧನ ಒದಗಿಸಲು ಕಾರ್ಯಕ್ರಮ.	ಹೊಸ ತಳಿ ಕರಿಮೆಣಸು - ಪ್ರಾತ್ಯಕ್ಷತೆ (0. 1 ಹೇ) ಸ್ಥಾಪನೆಗಾಗಿ ಮೊದಲನೇ ವರ್ಷ ಪ್ರತಿ ಘಟಕಕ್ಕೆ ರೂ. 225-00 ಎರಡನೇ ವರ್ಷ (1ನೇ ವರ್ಷ ನಿರ್ವಹಣೆ) ರೂ. 140-00 - 3ನೇ ವರ್ಷ (2ನೇ ವರ್ಷ ನಿರ್ವಹಣೆ) ರೂ. 150-00 ಸಾಮಗ್ರಿ ಒದಗಿಸಲು ಕಾರ್ಯಕ್ರಮ.

1	2	3	4
5.	ಉತ್ಕೃಷ್ಟ - ಕೊಕೋ ಗಿಡಗಳ ಉತ್ಪಾದನೆಗಾಗಿ ಕಾರ್ಯಕ್ರಮ ಇಲಾಖೆ - ತೋಟಗಾರಿಕೆ ಕ್ಷೇತ್ರಗಳಲ್ಲಿ ಉತ್ಕೃಷ್ಟವಾದ ಎಫ್- 1 ಹೈಬ್ರಿಡ್ ಕೊಕೋ ಸಸಿ ಹಾಗೂ ಕೊಕೋ ಕಸಿಗಳ ಉತ್ಪಾದನೆ ಮತ್ತು ರೈತರಿಗೆ ವಿತರಿಸುವ ಕಾರ್ಯಕ್ರಮ (ಪ್ರತಿ ಸಸಿಗೆ ರೂ. 3 ಹಾಗೂ ಕಸಿ ಉತ್ಪಾದನೆಗೆ ರೂ. 10-00ರಂತೆ ಉತ್ಪಾದನೆ ವೆಚ್ಚ)	ಅಧಿಕ ಇಳುವರಿ ಕೊಡುವ ಅಡಿಕೆ ಸಸಿಗಳ ಉತ್ಪಾದನೆ ಹಾಗೂ ವಿತರಣೆ ಕಾರ್ಯಕ್ರಮ - ಪ್ರತಿ ಸಸಿ ಉತ್ಪಾದನಾ ವೆಚ್ಚ ರೂ. 2-00 ಸಣ್ಣ ಅತಿ ಸಣ್ಣ ರೈತರಿಗೆ ರೂ. 1-00 ಪ್ರತಿ ಸಸಿಗೆ ರಿಯಾಯಿತಿ ದರದಲ್ಲಿ ಒದಗಿಸಲು ಕಾರ್ಯಕ್ರಮವಿರುತ್ತದೆ.	ಕರಿಮೆಣಸು (ಹೊಸತಳಿ) ಪ್ರದೇಶ ವಿಸ್ತರಣೆಗಾಗಿ ಪ್ರತಿ ಹೆಕ್ಟೆರ್ - ಪ್ರತಿ ಫಲಾನುಭವಿಗೆ ರೂ. 5000-00 (ಮೊದಲನೇ ವರ್ಷ) ರೂ. 3000-00 ಎರಡನೇ ವರ್ಷ ಹಾಗೂ ರೂ. 2000-00 ಮೂರನೆ ವರ್ಷ ನಿರ್ವಹಣೆಗಾಗಿ ಸಾಮಗ್ರಿ ಒದಗಿಸುವ ಕಾರ್ಯಕ್ರಮವಿರುತ್ತದೆ.

ಅನುಬಂಧ - 3

ಪ್ರಶ್ನೆ (ಇ) ಗೇರು ಮತ್ತು ಅಡಿಕೆ ಅಭಿವೃದ್ಧಿ ಯೋಜನೆಯಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಖರ್ಚು ಮಾಡಲಾದ ಮೊತ್ತ

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಬೆಳೆ	1995-96	1996-97	1997-98	ಷರಾ
1.	**ಗೇರು:**				
	ಬಿಡುಗಡೆಯಾದ ಹಣ	70.98 ಲಕ್ಷ	55.23 ಲಕ್ಷ	32.23 ಲಕ್ಷ	1. ಅನುಬಂಧ-11ರಲ್ಲಿ ನಮೂದಿಸಿದ ಕಾರ್ಯಕ್ರಮಗಳಡಿ ಆಯವ್ಯಯ ವೆಚ್ಚ ಮಾಡಲಾಗಿರುತ್ತದೆ.
	ವೆಚ್ಚ	64.76 ಲಕ್ಷ	54.66 ಲಕ್ಷ	32.23 ಲಕ್ಷ	2. ಬೆಳೆಗಳ ಅಭಿವೃದ್ಧಿ-ಯಾಗಿರುತ್ತದೆ.
2.	**ಅಡಿಕೆ**				
	ಬಿಡುಗಡೆಯಾದ ಹಣ	13.400	15.00	8.00	
	ವೆಚ್ಚ	13.279	13.48	7.99	

ಷರಾ: 1995-96 ಮತ್ತು 1996-97ನೇ ಸಾಲಿನಲ್ಲಿ ಅಡಿಕೆ ಅಭಿವೃದ್ಧಿ ಯೋಜನೆಯನ್ನು ಕೇಂದ್ರವಲಯ ಅನುಧಾನದ ಸಹಾಯದಿಂದ ಅನುಷ್ಠಾನಗೊಳಿಸಲಾಗಿದ್ದು, 1997-98ನೇ ಸಾಲಿಗೆ ಕೇಂದ್ರ ಸರ್ಕಾರವು ಯೋಜನೆಯನ್ನು ರದ್ದುಗೊಳಿಸಲಾಗಿರುವ ಪ್ರಯುಕ್ತ ರಾಜ್ಯ ಸರ್ಕಾರದ ನೆರವಿನಿಂದ ರೈತರಿಗೆ ಕೇವಲ ಮೈಲು ತುತ್ತ (ಶೇ. 50 ರಿಯಾಯಿತಿ ಸೌಲಭ್ಯದಡಿ) ಒದಗಿಸಲು ಕ್ರಮ ತೆಗೆದುಕೊಂಡಿದೆ.